> ನಾನು ಮಾಡುವ ಪ್ರತಿಯೊಂದು ಕಾರ್ಯವೂ ಕೂಡ ಜಗತ್ತಲ್ಲಿ ಎಲ್ಲೋ ಒಂದು ಕಡೆ ಸಮತೋಲನ ತಂದುಕೊಡುತ್ತೆ ಅನ್ನುವ ವಿಚಾರವನ್ನು ನಾನು ಬಲವಾಗಿ ನಂಬ್ತೀನಿ.



ಬರ್ಬೇಡ ಅಂದಿದಾರೆ, ಮತ್ತೊಂದು ಕಡೆ ಹುಡುಗರು ನನ್ನನ್ನ ಆಟಕ್ಕೆ ಸೇರಿಸಿಕೊಳ್ಳೋಕೆ ಮುಜುಗರ ಪಟ್ಟುಕೋತಾ ಇದಾರೆ. ಯಾರದೇ ಬಾಲ್ಯದಲ್ಲಿ ಆಟ ಅನ್ನೋದು ತುಂಬಾ ಮುಖ್ಯ ಆಗಿರತ್ತೆ. ಬಾಲ್ಯದಲ್ಲಿ ಆಟ ಇಲ್ಲದೆ ಇದ್ದಾಗ **you are forced to grow very soon.** ಅದು ನಿಮ್ಮನ್ನ ತುಂಬಾ ಬೇಗ ಬೆಳೆಯುವಂತೆ ಮಾಡಿಬಿಡತ್ತೆ. ನನ್ನನ್ನ ಎಲ್ಲರೂ ಕೇಳ್ತಾರೆ – 'ಹೇಗಿಷ್ಟು ಮೆಚ್ಯೂರ್? ಹೇಗಿಷ್ಟು ಮೆಚ್ಯೂರ್?' ಅಂತ! ನನಗೆ ಆಯ್ಕೆಗಳೇ ಇರಲಿಲ್ಲ. ಆ ಕ್ಲೋಸೆಟಲ್ಲಿ ನಾನು ಕ್ರಿಯಾತ್ಮಕವಾಗಿ ತೊಡಗಿಕೊಂಡೆ. ನನಗಾಗ ಅದು ಹೊಸ ಕ್ರಿಯಾತ್ಮಕ ಅನಿಸಿರಲಿಲ್ಲ. ನಾನು ಓದ್ತಾ ಇದ್ದೆ. ಡಾನ್ಸ್ ಮಾಡ್ತಾ ಇದ್ದೆ. ಅದು ನನಗೆ ಬೇರೆ ತರದಲ್ಲಿ ಸಹಾಯ ಮಾಡಿತು.

ಹೈಸ್ಕೂಲಿಗೆ ಬಂದಾಗ ಸಾಕಷ್ಟು ಅನುಭವಿಸೋದಾಯ್ತು. ಏನೋ ಒಂದು ಹೆಸರು ಕರೀತಾ ಇದ್ರು. ಟೀಚರ್ಸ್ ಹತ್ರ ಹೋದಾಗ ಅವ್ರು ನನ್ನನ್ನೇ ಬೈಯೋರು. 'ನೀನ್ಯಾಕ್ ಹಾಗ್ ಮಾಡ್ತಿಯಾ?', 'ನೀನ್ ಸರಿ ಇದ್ರೆ ಅವ್ರು ಏನೂ ಮಾಡಲ್ಲ!' ಅಂತೆಲ್ಲಾ ಅನ್ನೋರು. ನನಗೆ ಎಲ್ಲೇ ಏನೇ ಸಮಸ್ಯೆ ಆದಾಗ, ನೋವಾದಾಗ ಅದನ್ನ ಹೇಳ್ಕೊಳೋ ಪ್ರಯತ್ನ ಮಾಡೋವಂತಹ ಹಂತದಲ್ಲಿ ಅವ್ರು ನಾನೇ ಸಮಸ್ಯೆ ಅಂತ ತೋರಿಸ್ತಾ ಇದ್ರು. ಅದೇ ಬೇರೆ ಮಕ್ಕಳು ಏನೇ ಮಾಡಿದ್ರು ತಪ್ಪಲ್ಲ ಅನ್ನೋದು ಅವರ ನಿರೂಪಣೆಯಲ್ಲೇ ಗೊತ್ತಾಗ್ತಾ ಇತ್ತು. ಇಂತಹ ಹೊತ್ತಲ್ಲಿ ಒಳಚಾಚಿಕೊಳ್ಳೋದನ್ನೇ ಆಯ್ಕೆ ಮಾಡಿಕೊಳ್ಳಲೇಬೇಕಾಗ್ತಾ ಇತ್ತು.

◆ **ಬಾಲ್ಯದಲ್ಲಿ ಯಾವ ಯಾವ ಆಟಗಳನ್ನು ಆಡ್ತಾ ಇದ್ರಿ?**

ಖೋ ಖೋ ಆಡಿದೀನಿ. ಕುಂಟೆಬಿಲ್ಲೆ ಆಡಿದೀನಿ. ಹಾಕಿ ಆಡಿದೀನಿ. ಅಥ್ಲೆಟಿಕ್ಸ್ ಅಲ್ಲಿ ಕೂಡ ಮುಂದಿದ್ದೆ. ಆದ್ರೆ ಒಂದು ಹಂತ ಆದ ಮೇಲೆ ಎಲ್ಲಾ ನಿಂತೋಯ್ತು.

◆ **ನಿಮ್ಮ ಶಾಲೆಯ ಶಿಕ್ಷಕರ ಧೋರಣೆಗಳ ಬಗ್ಗೆ ಹೇಳಿದ್ರಿ. ಮನೇಲಿ ಯಾವ ರೀತಿ ವಾತಾವರಣ ಇತ್ತು? ಹುಡುಗಿಯರ ಗುಣಸ್ವಭಾವ (ಎಫೀಮಿನೇಟ್) ಇರುವಂತಹ**